ಮಾರುತಿಸೇವಾನಗರವು ಹೆಣ್ಣೂರು–ಬಾಣಸವಾಡಿ ಲೇಔಟ ಒದನೇ ಬ್ಲಾಕಿಗೆ ಹೊಂದಿಕೊಂಡಿದೆ. ಈ ಮಾರ್ಗದಲ್ಲಿ ಬಾಣಸವಾಡಿ ಮತ್ತು ಮಾರುತಿಸೇವಾನಗರ ನಡುವೆ ಎರಡು ಬಸ್ ನಿಲುಗಡೆಗಳನ್ನು ಆರ್ಧ ಕಿ.ಮೀ. ಗೂ ಕಡಿಮೆ ಅಂತರದಲ್ಲಿ 1 ನೇ ಬ್ಲಾಕಿನ ನಿವಾಸಿಗಳಿಗೆ ಅನುಕೂಲವಾಗುವಂತೆ ಒದಗಿಸಲಾಗಿದೆ. ಆದುದರಿಂದ ಸದರೀ ಲೇಔಟ್‌ನ ಈಗಿನ ನಿವಾಸಿಗಳು ತೊಂದರೆ ಇಲ್ಲದೇ ಬಾಣಸವಾಡಿ, ಕಲ್ಕರೆ ಮತ್ತು ರಾಮಮೂರ್ತಿನಗರಗಳಿಂದ ಮುಖ್ಯ ಬಸ್ ನಿಲ್ದಾಣಗಳಿಂದ ನಗರ ಮಾರುಕಟ್ಟೆ, ಶಿವಾಜಿನಗರ ಮತ್ತು ಸುಭಾಷ್‌ನಗರ ನಿಲ್ದಾಣಗಳಿಗೆ ಸಂಚರಿಸಬಹುದು.

ಆದಾಗ್ಯೂ ಬೆಂಗಳೂರು ನಗರ ಸಾರಿಗೆ ವಿಭಾಗವು ಹೆಣ್ಣೂರು–ಬಾಣಸವಾಡಿ ಲೇಔಟ್ ಪೂರ್ಣ ಅಭಿವೃದ್ಧಿಯಾದ ನಂತರ ಆಲ್ಲಿಂದ ನಗರ ಮಾರುಕಟ್ಟೆ ಮತ್ತು ಶಿವಾಜಿನಗರ ಬಸ್ ನಿಲ್ದಾಣಗಳಿಗೆ ಸಾರಿಗೆ ಸೌಕರ್ಯ ಒದಗಿಸುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

ಬೆಂಗಳೂರು – ಮೈಸೂರು ರಸ್ತೆಯ ವಿಸ್ತರಣೆ.

ಶ್ರೀ ಎಂ.ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೆ, ಬೆಂಗಳೂರು – ಮೈಸೂರು ರಸ್ತೆ ಅತಿ ಪ್ರಾಮುಖ್ಯವಾದ ಹೆದ್ದಾರಿಯಾಗಿದ್ದು, ಈ ರಸ್ತೆಯಲ್ಲಿ ವಾಹನ ಸಂಚಾರ ದಟ್ಟವಾಗಿದ್ದು, ದಿನೇದಿನೇ ವಾಹನಗಳ ಸಂಖ್ಯೆ ಹೆಚ್ಚಾಗುತ್ತಾ ಇದೆ. ಸದರಿ ರಸ್ತೆಯು ಹಾಲಿ ಇರುವ ಸ್ಥಿತಿಯಲ್ಲಿ ವಾಹನ ಸಂಚಾರದ ಒತ್ತಡವನ್ನು ನಿರ್ವಹಿಸಲು ಸಮರ್ಥನೀಯ ಸ್ಥಿತಿಯಲ್ಲಿರುವುದಿಲ್ಲ. ಅನೇಕ ಅಪಘಾತಗಳು ದಿನನಿತ್ಯ ಸಂಭವಿಸುತ್ತಾ ಇದೆ. ಈ ರಸ್ತೆಯಲ್ಲಿ ವಾಹನ ಸಂಚಾರವನು ಸುಗುಮಗೊಳಿಸಲು, ರಸ್ತೆಯ ವಿಸ್ತರಣೆ ಅತಿ ಅವಶ್ಯವು ಹಾಗೂ ಜರೂರಾಗಿದೆ. ಈ ಬಗ್ಗೆ ಶೀಘ್ರ ಕಮ; ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ:– ಮಾನ್ಯ ಅಧಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆ ಓದಬಯಸುತ್ತೇನೆ.

ಬೆಂಗಳೂರು–ಮೈಸೂರು ರಸ್ತೆಯು 139 ಕಿ.ಮೀ. ಉದ್ದವಿದೆ. ಇದು ಈ ರಾಜ್ಯದ ಒಂದು ಮುಖ್ಯ ಹೆದ್ದಾರಿಯಾಗಿರುತ್ತದೆ. ಈ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆಯು ಅತೀ ತೀವ್ರವಗಿದೆ. ಈ ರಸ್ತೆಯನ್ನು ಅಭಿವೃದ್ಧಿಪಡಿಸಿ ಸುಸ್ಥಿತಿಯಲ್ಲಿಡಲು ರಾಜ್ಯ ಸರ್ಕಾರವು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ. 1990–91ನೇ ಸಾಲಿಗೆ ಈರಸ್ತೆಯಲ್ಲಿ ಬರುವ ಅಪಾಯಕಾರಿಯಾದ ತಿರುವುಗಳನ್ನು ನೇರ ಮಾಡುವುದು, ಅತ್ಯಂತ ತೀವ್ರ ವಾಹನ ಸಂಚಾರ ದಟ್ಟಣೆ ಇರುವ ಕಡೆ ರಸ್ತೆಯನ್ನು ಅಗಲಗೊಳಿಸುವುದು, ಮುಂತಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಹಾಗೂ ಈ ಸಾಲಿನಲ್ಲಿ ಈ ರಸ್ತೆಗೆ 50.00 ಲಕ್ಷ ರೂ. ಗಳನ್ನು ನಿಗಧಿಪಡಿಸಲಾಗಿದೆ. ಇದೂ ಅಲ್ಲದೇ, ಈ ರಸ್ತೆಯ ಅಭಿವೃದ್ಧಿಯನ್ನು ಓ.ಇ.ಸಿ.ಎಫ್. (ಜಪಾನ್ ದೇಶದ ಸಹಾಯ ಯೋಜನೆ) ಅಡಿಯಲ್ಲಿ ಅಭಿವೃದ್ಧಿಪಡಿಸಲು ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.

ಬೆಂಗಳೂರು–ಮೈಸೂರು – ಹುಣಸೂರು–ವಿರಾಜಪೇಟೆ ಮೂಲಕ ಕೇರಳ ರಾಜ್ಯದಲ್ಲಿರುವ ತಲ್ಲಿಚೇರಿಗೆ ಇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಈ ರಸ್ತೆಯ ಪ್ರಾಮುಖ್ಯತೆಯನ್ನು ಮನಗಂಡ ರಸ್ತೆಯ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಮಾಡಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.

7. ಬೆಳಗಾವಿ ಜಿಲ್ಲೆಯ ಹುಕ್ಕೇರಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವುದು.

ಶ್ರೀ ವಿ. ಉಮೇಶಕಟ್ಟಿ :– ಮಾನ್ಯ ಅಧ್ಯಕ್ಷರೇ,

ಬೆಳಗಾಂ ಜಿಲ್ಲೆಯ ಹುಕ್ಕೇರಿ ನಗರದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದ್ದು, ಅಲ್ಲಿ ಹತ್ತು ಕೊಳವೆ ಬಾವಿಗಳನ್ನು ಜಿಲ್ಲಾಧಿಕಾರಿಗಳು ತೋಡಿಸಿದ್ದು ಅವು ಸಹ ಸಫಲ ಆಗಿರುವುದಿಲ್ಲ.

ಆದಕಾರಣ ಜಿಲ್ಲಾಧಿಕಾರಿಗಳು 27 ಲಕ್ಷ ರೂಪಾಯಿ ನೀರಿನ ಯೋಜನೆಯನ್ನು ಕೊಟಬಾಗಿರದಿಂದ ಹುಕ್ಕೇರಿವರೆಗೆ ತೆಗೆದುಕೊಳ್ಳಲು ಪ್ಲಾನ್ ಅಂಡ್ ಎಸ್ಟಿಮೇಟ್ ಮಾಡಿಸಿರುವರು ಅದಕ್ಕೆ ಮನ್ನಣೆ ಕೊಟ್ಟು ಕೊಡಲೆ ಕೆಲಸ ಪ್ರಾರಂಭಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸಳೆಯುತ್ತೇನೆ.

ಶ್ರೀ ಕೆ.ಜೆ ಜಾರ್ಜ್:– (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು ಸಂಕೇಶ್ವರ–ಘಟಪ್ರಭಾ ರಸ್ತೆಯ ಹಾದಿಯಲ್ಲಿರುತ್ತದೆ. 1981ರ ಜನಗಣತಿಯ ಪ್ರಕಾರ ಈ ಪಟ್ಟಣದ ಜನಸಂಖ್ಯೆಯು 15,534 ಆಗಿದ್ದು ಹಾಗೂ ಈಗಿನ ಜನಸಂಖ್ಯೆಯು ಸುಮಾರು 18,000 ಇರಬಹುದು. 1985ನೇ ವರ್ಷದಲ್ಲಿ ಸರ್ಕಾರವು ಹುಕ್ಕೇರಿ ಪಟ್ಟಣಕ್ಕೆ ಹಾಲಿ 10,000 ಗ್ಯಾಲನ್ ಪ್ರತಿ ಗಂಟೆಗೆ ನೀರಿನ ವರತೆ ಇದ್ದ ಕೊಳವೆ ಬಾವಿಗಳನ್ನು ಹಾಗೂ ಹೊಸ ಕೊಳವೆ ಬಾವಿಗಳನ್ನು ಜಲ ಮೂಲವಾಗಿಟ್ಟುಕೊಂಡು ಒಂದು ನೀರು ಸರಬರಾಜು ಯೋಜನೆಯನ್ನು ರೂ. 27.00 ಲಕ್ಷ ಅಂದಾಜಿನಲ್ಲಿ ಮಂಜೂರು ಮಾಡಿರುತ್ತದೆ. ಈ ಯೋಜನೆಯನ್ನು ಮುಗಿಸಲಾಗಿದ್ದು, ಈಗ 10,000 ಗ್ಯಾಲನ್ ಪ್ರತಿಗಂಟೆ ನೀರಿನ ವರೆಯಿದ್ದ ಕೊಳವೆ ಬಾವಿಗಳ ನೀರಿನ ವರತೆ ಬಹಳಷ್ಟು ಕಡಿಮೆಯಾಗಿರುತ್ತದೆ ಮತ್ತು ಬೇರೆ ಕೊಳವೆ ಬಾವಿಗಳು ಸಹಾ ವಿಫಲವಾಗಿರುತ್ತವೆ. ಸದ್ಯಕ್ಕೆ 2,000 ಗ್ಯಾಲನ್ ಪ್ರತಿ ಗಂಟೆಗೆ ನೀರಿನ ಕೊರತೆ ಇರುವ ಕೊಳವೆ ಬಾವಿ ಮಾತ್ರ ಕೆಲಸ ಮಾಡುತ್ತಿದೆ. ಇದರಿಂದ ದಿನ 20,000 ಗ್ಯಾಲನ್ ನೀರು ಒದಗಿಸಲಾಗುತ್ತಿದೆ.

ಮೇಲೆ ಹೇಳಿದ ಕಾರಣಗಳಿಂದ ಜಿಲ್ಲಾಧಿಕಾರಿಗಳು ಹೆಚ್ಚುವರಿ 10 ಕೊಳವೆ ಬಾವಿಗಳನ್ನು ಕೊರೆಯಲು ನಿರ್ಧರಿಸಿ, ಅವುಗಳಲಿ 4 ಕೊಳವೆ ಬಾವಿಗಳನ್ನು ತೋಡಲಾಗಿದ್ದು ಇವು ಎಲ್ಲಾ ಕೊಳವೆ ಬಾವಿಗಳು ವಿಫಲಗೊಂಡಿರುತ್ತದೆ. ಆದುದರಿಂದ ಉಳಿದ ಕೊಳವೆ ಬಾವಿಗಳನ್ನು ಕೊರೆಯಲು ನಿಲ್ಲಿಸಲಾಯಿತು. ಈಗ ನೀರನ್ನು ಎರಡು ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡಲಾಗುತ್ತಿದೆ. ಟ್ಯಾಂಕರ್‌ಗಳಿಂದ ದಿನ, 20,000 ಗ್ಯಾಲನ್ ನೀರು ಸರಬರಾಜು ಮಾಡಲಾಗುತ್ತಿದೆ.

ಹುಕ್ಕೇರಿ–ಸಂಕೇಶ್ವರ ಪಟ್ಟಣಗಳಿಗೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ 500.00 ಲಕ್ಷ ರೂ. ಗಳ ಅಂದಾಜಿಗೆ ಸರ್ಕಾರವು ಆ ಸಂಖ್ಯೆ. ವನಿ 214 ಯುಎಂಎಸ್ 89, ದಿನಾಂಕ 30–3–90 ಆಡಳಿತ ಅನುಮೋದನೆಯನ್ನು ನೀಡಿದೆ. ಈ ಯೋಜನೆಯ ಜಲಮೂಲವು ಹಿಡಕಲ್ ಜಲಾಶಯದ ಕೆಳಭಾಗದ ಘಟಪ್ರಭಾ ನದಿ ಆಗಿರುತ್ತದೆ. ಜಾಕಬೆಲ್ ಹಾಗೂ ಪಂಪ್‌ಹೌಸ್ ಜಲಶುದ್ದೀಕರಣ ಘಟಕ, ನೆಲಮಟ್ಟದ ಜಲಸಂಗ್ರಹಾಗಾರ ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ. ಈ ಕೆಲಸಗಳಿಗೆ ಗುತ್ತಿಗೆದಾರರನ್ನು ನೇಮಿಸಿದ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು.' ಈ ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು ಮೂರು ವರ್ಷ ಕಾಲಾವಧಿ ಬೇಕಾಗುವುದು.

ಆದ ಕಾರಣ ಈ ಮಧ್ಯ ಕೊಳವೆ ಬಾವಿಗಳ ಕಡಿಮೆ ನೀರಿನ ವರತೆಯಿಂದ ಉಂಟಾದ ಗಂಭೀರ ಸಮಸ್ಯೆಯನ್ನು ನೀಗಿಸಲು ಘಟಪ್ರಭಾ ನದಿಯನ್ನು ತೋಟಬಾಗಿ ಹತ್ತಿರ ಮೂಲವಾಗಿಟ್ಟುಕೊಂಡು ಒಂದು ನೀರು ಸರಬರಾಜು ಯೋಜನೆಯನ್ನು 33 ಲಕ್ಷ ರೂ. ಗಳ ಅಂದಾಜಿನಲ್ಲಿ ಪುರಸಭೆ ಹುಕ್ಕೇರಿಯವರ ಬೇಡಿಕೆಯಂತೆ ತಯಾರಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ಜಾಕ್‌ವೆಲ್ ಹಾಗೂ ಪಂಪ್‌ಹೌಸ್ ಕಟ್ಟುವುದು ಯಂತ್ರಗಳನ್ನು ಅಳವಡಿಸುವುದು, 6 ಇಂಚ್ ವ್ಯಾಸದ 9.2 ಕಿ.ಮಿ. ಉದ್ದದ ಬೀಡು ಕಬ್ಬಿಣದ ಖರು ಕೊಳವೆ ಮಾರ್ಗವನ್ನು ಹಾಕುವುದು ಮತ್ತು ಸೆಂಟಲಿಂಗ್ ಟ್ಯಾಂಕ್ ಕಟ್ಟಲು ಯೋಜಿಸಲಾಗಿದೆ. ಈ ಯೋಜನೆ ಆರು ತಿಂಗಳುಗಳಲ್ಲಿ ಮುಗಿಸಬಹುದಾಗಿದೆ. ಇದಕ್ಕೆ ಬೇಕಾಗುವ ಹಣವನ್ನು ಅಭಾವ ಪರಿಹಾರ ಕಾಮಗಾರಿ ಅಡಿಯಲ್ಲಿ ಅಥವಾ ಹಾಲಿ ನಡೆಯುತ್ತಿರುವ ಯೋಜನೆಯನ್ನು ಸೂಕ್ತವಾಗಿ ಮಾರ್ಪಡಿಸಿ ಮೇ ಜೂನ್ 1991ರ ಒಳಗೆ ನೀರನ್ನು ಒದಗಿಸಲು ಸಾಧ್ಯವಾಗುವುದು.